ಅಲ್ಲಿ ಬಂದ್‌ಗೆ ಕರೆ ಕೊಟ್ಟಿರುವ ಜನರ ಮನಮೊಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿರುವ ರಸ್ತೆಗಳ ರಿಪೇರಿಯನ್ನು ಮಾಡಲು PWD ಯವರು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಬೊಮ್ಮಾಯಿ ಸಾಹೇಬರ ನೀರಾವರಿ ಇಲಾಖೆಗೆ ಸೇರಿದ ರಸ್ತೆಗಳೂ ಸಹ ಇವೆ. ಅಲ್ಲಿ ಜನ ಗಲಾಟೆ ಮಾಡುತ್ತಿದ್ದಾರೆ. ಮೊನ್ನೆ ಮಾನ್ಯ Law Minister ರವರೂ ಸಹ ಅಲ್ಲಿಗೆ ಭೇಟಿ ಕೊಟ್ಟಿದ್ದರು. ಇವತ್ತು ಅಲ್ಲಿ ಊರಿನ ಜನರು, ಕಾಲೇಜು ಹುಡುಗರು ಎಲ್ಲರೂ ಸೇರಿ ಪುನಃ ಬಂದ್ ಮಾಡಿದ್ದಾರೆ. ನಮ್ಮ ದುರ್ದೈವವೆಂದರೆ, ಅಲ್ಲಿನ ಶಾಸಕನಾದ ನಾನು ಅಪವಾದಕ್ಕೆ ಗುರಿಯಾಗುತ್ತಿದ್ದೇನೆ.

**ಶ್ರೀ ಬಸವರಾಜ್ ಬೊಮ್ಮಾಯಿ :–** ಮಾನ್ಯ ಅಧಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ರಸ್ತೆಗಳ ರಿಪೇರಿಗೆ ಕ್ರಮ ವಹಿಸಲಾಗಿದೆ. ನಾವು ಕ್ರಮ ಕೈಗೊಂಡಿರುವುದರ ಬಗ್ಗೆ ಮಾನ್ಯ ಸದಸ್ಯರಿಗೂ ತಿಳಿಸಿದ್ದೇವೆ. ರಸ್ತೆಗಳ ರಿಪೇರಿಗಾಗಿ ನಬಾರ್ಡ್‌ಗೆ ಪ್ರಸ್ತಾವನೆ ಕಳುಹಿಸಿದ್ದೇವೆ. ಬಹುತೇಕ ಮುಂದಿನ 10–15 ದಿನಗಳಲ್ಲಿ ಅದು ಅಂಗೀಕಾರವಾಗಿ ಬರುತ್ತದೆ. ಅದು ಬಂದ ತಕ್ಷಣ, ಅದರ ರಿಪೇರಿ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಯಾವ ರಸ್ತೆ ರಿಪೇರಿ ಸಂಬಂಧ strike ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಒಂದು ವೇಳೆ ಅವರು KRDCL ರಸ್ತೆಗಳ ರಿಪೇರಿ ಬಗ್ಗೆ ಮಾತನಾಡುತ್ತಿದ್ದರೆ, ಅದು PWD ವ್ಯಾಪ್ತಿಗೆ ಬರುತ್ತದೆ. ಸದ್ಯಕ್ಕೆ ನಮ್ಮ ಇಲಾಖೆ ವ್ಯಾಪ್ತಿಗೆ ಬರುವ ರಸ್ತೆಗಳ ರಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಎಂದಷ್ಟೇ ಹೇಳಬಯಸುತ್ತೇನೆ.

**ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) :–** ಮಾನ್ಯ ಅಧ್ಯಕ್ಷರೆ, State Highway Improvement Projectನ first phase ನಲ್ಲಿ ಕೈಗೆತ್ತಿಕೊಳ್ಳತಕ್ಕ ಕಾಮಗಾರಿಗಳಲ್ಲಿ ಇದೂ ಸೇರಿದೆ. ಈಗ ಮಾನ್ಯ ಮುಖ್ಯಮಂತ್ರಿಗಳ ಮುಂದೆ ಆ ಪ್ರಸ್ತಾವನೆ ಇದೆ. ಇಡೀ ರಾಜ್ಯದ ಎಲ್ಲಾ ರಸ್ತೆಗಳ ರಿಪೇರಿ ಮಾಡುವುದಕ್ಕೆ ಸುಮಾರು ಎರಡು ಸಾವಿರ ಕೋಟಿ ರೂ.ಗಳು ಬೇಕಾಗುತ್ತದೆ. ಇದನ್ನು ದಯವಿಟ್ಟು ಆದ್ಯತೆ ಮೇರೆಗೆ ರಿಪೇರಿಗೆ ಕೈಗೆತ್ತಿಕೊಳ್ಳಬೇಕು. Please take it on priority. ಅಲ್ಲಿ ಕಳೆದ 4–5 ವರ್ಷಗಳಿಂದ ಸಂಚಾರ ಮಾಡಲಿಕ್ಕಾಗುತ್ತಿಲ್ಲ. ಮಾನ್ಯ ಬೊಮ್ಮಾಯಿಯವರಿಗೆ ಇದು ಗೊತ್ತಿದೆ. ದಯವಿಟ್ಟು ಮಂತ್ರಿಗಳು ಸ್ವಲ್ಪ ಈ ಕಡೆಗೆ ಗಮನಹರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**2) ವಿಷಯ: ಉಪ್ಪಾರ ಜನಾಂಗದವರಿಗೆ ಆಯವ್ಯಯದಲ್ಲಿ ಹೆಚ್ಚಿನ ಹಣವನ್ನು ಮೀಸಲಾಗಿಡುವ ಬಗ್ಗೆ**

**ಶ್ರೀ ಶ್ರೀಕಾಂತ ಎಸ್. ಕುಲಕರ್ಣಿ (ಜಮಖಂಡಿ)** :– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿರುವ ಉಪ್ಪಾರ ಸಮಾಜದವರು ಸಾಕಷ್ಟು ಹಿಂದುಳಿದಿದ್ದಾರೆ. ಶೈಕ್ಷಣಿಕವಾಗಿ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಬಹಳ ದೊಡ್ಡ ಸಂಖ್ಯೆಯಲ್ಲಿರುವ ಈ ಸಮಾಜದವರಿಗೆ ಸರಿಯಾದಂತಹ ಸಾಮಾಜಿಕ ಸಮಾನತೆ ಇನ್ನೂ ಸಿಕ್ಕಿಲ್ಲ. ತಮ್ಮನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂಬ demand ಅನ್ನೂ ಸಹ ಅವರು ಸರ್ಕಾರದ ಮುಂದಿಟ್ಟಿದ್ದಾರೆ.

**ಅಧ್ಯಕ್ಷರು** :– ಇದು ಶೂನ್ಯ ವೇಳೆಯ ಪ್ರಸ್ತಾಪ, ಬೇಡ. ಮಾನ್ಯ ಸಚಿವರು ಉತ್ತರ ಹೇಳಿ.

**ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ** :– ಕೇಂದ್ರ ಸರ್ಕಾರದವರು ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಈ ಸಮಾಜಕ್ಕೆ ರಾಜ್ಯ ಸರ್ಕಾರದವರು 2009–10 ರಲ್ಲಿ 5 ಕೋಟಿ ರೂ.ಗಳನ್ನು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಇಟ್ಟಿದ್ದರು. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಮುಂದಿನ ಬಜೆಟ್‌ನಲ್ಲಿ ಈ ಜನಾಂಗದವರ ಅಭಿವೃದ್ಧಿಗಾಗಿ ಕನಿಷ್ಠ ಪಕ್ಷ 20–25 ಕೋಟಿ ರೂ.ಗಳನ್ನು ಮೀಸಲಿಡಲು ಪ್ರಯತ್ನ ಮಾಡಬೇಕು.

**ಶ್ರೀ ಎ. ನಾರಾಯಣ ಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು)** :– ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಉಪ್ಪಾರ ಸಮಾಜಕ್ಕೆ ವಿಶೇಷವಾದ ಸವಲತ್ತನ್ನು ಕೊಟ್ಟಿದೆ. ಆ ನಿಟ್ಟಿನಲ್ಲಿ ಯೋಚನೆ ಮಾಡಿದೆ. ರಾಜ್ಯ ಸರ್ಕಾರ ಉಪ್ಪಾರ ಜನಾಂಗದ ಅಭಿವೃದ್ಧಿಗಾಗಿ 2008–09 ಮತ್ತು 2009–10ರಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಹಣ ಮೀಸಲಿಡಲಾಗಿದೆ. ಆದರೆ ನಂತರದ ಸಾಲುಗಳಲ್ಲಿ ಆಯವ್ಯಯದಲ್ಲಿ ಸಮಾಜವಾರು ಪ್ರತ್ಯೇಕವಾಗಿ ಹಣವನ್ನು ಒದಗಿಸಿರುವುದಿಲ್ಲ. ನಿಗಮಕ್ಕೆ ಒದಗಿಸಿದ ಒಟ್ಟಾರೆ ಆಯವ್ಯಯದ ಮೊತ್ತದಲ್ಲಿ ಉಪ್ಪಾರ ಜನಾಂಗದವರಿಗೆ ಅಭಿವೃದ್ಧಿ ಯೋಜನೆಗಳಲ್ಲಿ ಸೌಲಭ್ಯ ಒದಗಿಸಲಾಗುತ್ತಿದೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ–1 ರಲ್ಲಿ

95 ಮತ್ತು ಪ್ರವರ್ಗ 2ಎ ರಲ್ಲಿ 103 ಮುಖ್ಯ ಜಾತಿಗಳಿದ್ದು, ಜಾತಿವಾರು ಆಯವ್ಯಯ ಒದಗಿಸಲು ಸಾಧ್ಯವಿಲ್ಲ. ಆದರೆ ರಾಜ್ಯ ಸರ್ಕಾರವು ಒದಗಿಸುತ್ತಿರುವ ಆಯವಯ್ಯದಲ್ಲಿ ಪ್ರವರ್ಗ–1 ಮತ್ತು ಪ್ರವರ್ಗ–2ಎ ಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಅದರಲ್ಲಿ ಉಪ್ಪಾರ ಜನಾಂಗದ ಅಭಿವೃದ್ಧಿಗೂ ಸಹ ಆರ್ಥಿಕ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು. ವಿಶೇಷವಾಗಿ 2008–09 ರಿಂದ ಮೂರು ವರ್ಷಗಳಲ್ಲಿ 9.52 ಕೋಟಿ ರೂ.ಗಳನ್ನು ವೆಚ್ಚ ಮಾಡಿದ್ದೇವೆ. ನಿಗಮದ ವತಿಯಿಂದ 1ಕೋಟಿ 67 ಲಕ್ಷ ರೂ.ಗಳನ್ನು ವೆಚ್ಚ ಮಾಡಿದ್ದೇವೆ. ನಮ್ಮ ಸರ್ಕಾರ ವಿಶೇಷವಾದ ಕಾಳಜಿ ವಹಿಸಿ ಉಪ್ಪಾರ ಜನಾಂಗದವರಿಗೆ ಮುಂದಿನ ಆಯ್ಯವಯದಲ್ಲಿ 10 ಕೋಟಿ ರೂ.ಗಳನ್ನು ಮೀಸಲಾಗಿಡಬೇಕೆಂದು ಯೋಚಿಸಿದ್ದೇವೆ. ರಾಜ್ಯದಲ್ಲಿ 8 ಲಕ್ಷ ಉಪ್ಪಾರ ಸಮಾಜದ ಜನರಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಈ ಬಗ್ಗೆ ಚರ್ಚೆ ಮಾಡಿ, ಮುಂದಿನ ಬಜೆಟ್‌ನಲ್ಲಿ ಈ ಜನಾಂಗಕ್ಕೆ ಹೆಚ್ಚಿನ ಹಣವನ್ನು ಮೀಸಲಿಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**3) ವಿಷಯ : ಚಾಮರಾಜನಗರ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕಾತಿಗೊಂಡವರನ್ನು ಸೇವೆಯಿಂದ ವಜಾ ಮಾಡುತ್ತಿರುವ ಬಗ್ಗೆ**

**ಡಾ: ಹೆಚ್.ಸಿ. ಮಹಾದೇವಪ್ಪ (ಟಿ.ನರಸೀಪುರ) :–** ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ 2002 ಮತ್ತು 2004 ರಲ್ಲಿ ಕ್ರಮವಾಗಿ 13 + 13 ರಂತೆ ಒಟ್ಟು 26 ಜನ ನೌಕರರನ್ನು ನೇಮಕಾತಿ ಮಾಡಿಕೊಳ್ಳಲಾಗಿತ್ತು. ವಾಹನ ಚಾಲಕರು, ದ್ವಿತೀಯ ದರ್ಜೆ ಸಹಾಯಕರು, Village Accountants, ಇತ್ಯಾದಿ ಬ್ಯಾಕ್‌ಲಾಗ್ ಹುದ್ದೆಗಳಿಗೆ ಸಮಾಜ ಕಲ್ಯಾಣ ಇಲಾಖೆ Commissioner ರವರ ನಿರ್ದೇಶನದ ಪ್ರಕಾರ ಇವರ ನೇಮಕ ಮಾಡಲಾಗಿತ್ತು. ಇವರು ಸುಮಾರು 6 ರಿಂದ 9 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ, ಜ್ಯೇಷ್ಠತೆಯನ್ನೂ ಸಹ ಪಡೆದುಕೊಂಡಿದ್ದಾರೆ. 2004ರಲ್ಲಿ ಇವರು ಕೆಲಸಕ್ಕೆ ಸೇರಿದರು. 2004ರ ನಂತರ ಬಂದಂತಹ ಜಿಲ್ಲಾಧಿಕಾರಿಗಳು, ಇದು ಹೊಸ ಜಿಲ್ಲೆಯಾಗಿರುವುದರಿಂದ, ಇಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಉದ್ಭವಿಸುವುದಿಲ್ಲ ಎಂದು